**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಒಎಸ್ 183/2020**

**ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿನಾಂಕ 03.02.2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಹೆಚ್.ಕೆ.ಹೆಚ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

ನಾನು ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ್ದೇನೆ. ವಾದಿಗೆ ಕಾಲು ಆಪರೇಷನ ಆಗಿರುವ ಕಾರಣ ಓಡಾಡಲು ಆಗುವುದಿಲ್ಲ ಆದಕಾರಣ ಆಕೆ ನನಗೆ ಅಧಿಕಾರ ಪತ್ರವನ್ನು ಬರೆದುಕೊಟ್ಟಿದ್ದಾರೆ. ವಾದಿಗೆ ಕಾಲು ನೋವು ಎಂದು ಹೇಳಲು ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ವಾದಿಗೆ ಕಾಲುನೋವು ಎಂದು ಹೇಳಲು ಜಿ.ಪಿ.ಎ ಅಲ್ಲಿ ನಮೂದಿಸಲಾಗಿದೆ. ನಿಪಿ 1 ಲ್ಲಿ ವಾದಿಗೆ ಕಾಲುನೋವು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ವಾದಿಗೆ ಕಾಲುನೋವು ಎಂದು ನಮೂದು ಇಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ 70 ವರ್ಷ ವಯಸ್ಸು. ವಾದಿಗೆ ಸುಮಾರು 73-74 ವರ್ಷ. ನನ್ನ ಹಾಗೂ ವಾದಿಯ ವಯಸ್ಸಿನ ಬಗ್ಗೆ ದೃಡಿಕರಿಸಲು ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಜಿ.ಪಿ.ಎ ಪತ್ರವನ್ನು ವಕೀಲರು ತಯಾರಿಸಿ ಕೊಟ್ಟರು ಅದನ್ನು ನಾನು ತೆಗೆದುಕೊಂಡು ಹೋಗಿ ವಾದಿಯಿಂದ ಸಹಿ ಪಡೆದುಕೊಂಡು ಬಂದಿರುತ್ತೇನೆ. ನಿಪಿ 1 ಸಿದ್ದಪಡಿಸುವಾಗ ವಾದಿ ನಿಪಿ 1 ಸಿದ್ದಪಡಿಸಿದ ಸ್ಥಳದಲ್ಲಿ ಇರಲಿಲ್ಲ. ನಿಪಿ1 ಸಿದ್ದಪಡಿಸಿದ ನಿಖರವಾದ ಸ್ಥಳ ನೆನಪಿಲ್ಲ. ನಿಪಿ 1 ಸಿದ್ದಪಡಿಸುವಾಗ ಸ್ಥಳದಲ್ಲಿ ನನ್ನ ಜೊತೆ ವಾದಿ ಮತ್ತು ವಾದಿಯ ಗಂಡ ಇದ್ದರು. ನಿಪಿ 1 ಬರೆಸಿದ ದಿನಾಂಕ ನೆನಪಿಲ್ಲ. ನಿಪಿ 1 ರ ಸ್ಟಾಂಪ್ ಪೇಪರ್ ನ್ನು ವಾದಿಯ ಗಂಡ ವಕೀಲರಿಗೆ ತಂದುಕೊಟ್ಟಿದ್ದಾರೆ. ನಿಪಿ 1 ಸ್ಟಾಂಪ್ ಪೇಪರ್ ಪಡೆದದ್ದು ಹಾಗೂ ಬರೆದಿದ್ದು ಒಂದೆ ದಿನ. ವಾದಿಯ ಗಂಡ ಕೆ.ಆರ್.ನಗರಕ್ಕೆ 2 ದಿನಗಳ ಕಾಲ ಬಂದಿದ್ದರು. ನನ್ನ ಭಾವ ಯಾವ ದಿನಾಂಕದಂದು ಬಂದರು ಎಂದು ನನಗೆ ನೆನಪಿಲ್ಲ. ನನ್ನ ಭಾವ ದಿನ ಬಿಟ್ಟು ದಿನ ಕೆ.ಆರ್.ನಗರಕ್ಕೆ ಬಂದು 2 ದಿನಗಳ ಕಾಲ ಇದ್ದು ನಿಪಿ1 ಮಾಡಿಸಿದ್ದಾರೆ.

3. ನಿಪಿ 1 ನ್ನು ನೋಟರಿ ವಕೀಲರ ಸಮ್ಮುಖದಲ್ಲಿ ಮಾಡಿಸಿದ್ದೇವೆ. ನೋಟರಿ ವಕೀಲರು ಎಲ್ಲಿ ಇರುವುದು ಎಂದು ನನಗೆ ಗೊತ್ತಿಲ್ಲ. ನಿಪಿ 1 ಕ್ಕೆ ನಾನು ಹಾಗೂ ವಾದಿ ಸಹಿ ಮಾಡಿದ್ದೇವೆ. ಅದನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ. ನಿಪಿ 1 ರಲ್ಲಿರುವ ಮಾಹಿತಿಯನ್ನು ವಕೀಲರು ಹೇಳಿ ಬರೆಸಿರುತ್ತಾರೆ. ನಿಪಿ 1 ನ್ನು ವಾದಿಯ ಗಂಡ ಖರೀದಿ ಮಾಡಿರುತ್ತಾರೆ. ನಿಪಿ1 ರ ಒಕ್ಕಣಿಗಳನ್ನು ನಿಪಿ 1 ಖರೀದಿ ಮಾಡಿದ ಎಷ್ಟು ದಿನಕ್ಕೆ ಪೂರ್ಣಗೊಳಿಸಲಾಯಿತು ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ಖರೀದಿಸಿದ ದಿನದಿಂದ ಅದನ್ನು ಬರೆಯುವವರೆಗೂ 1 ತಿಂಗಳ ಅವಧಿಯ ಅಂತರವಿದ್ದು ಅಲ್ಲಿಯವರೆಗೂ ನಿಪಿ 1 ವಾದಿಯ ಸ್ವಾಧೀನದಲ್ಲಿತ್ತು. ವಾದಿ ಕೆ.ಆರ್.ನಗರಕ್ಕೆ ಬರುವುದು ಹೋಗುವುದು ಮಾಡುತ್ತಿದ್ದರು ಎಂದರೆ ಕಾರಿನಲ್ಲಿ ಬರುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

4. ನನಗೆ ಕನ್ನಡ ಭಾಷೆ ಬರೆಯಲು ಓದಲು ಬರುತ್ತದೆ. ಇಂಗ್ಲೀಷ ಭಾಷೆ ಓದಲು ಬರೆಯಲು ಬರುವುದಿಲ್ಲ. ದಾವಾ ಪ್ರತಿಯಲ್ಲಿ ಕಾಣುವ ವಾದಿಯ ಸಹಿಗೂ ನಿಪಿ 1 ರಲ್ಲಿ ಕಾಣುವ ವಾದಿಯ ಸಹಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ದಾವಾ ಪ್ರತಿಗಾಗಲೀ ನಿಪಿ 1 ಕ್ಕಾಗಲೀವಾದಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಸಹಿಯನ್ನು ಸೃಷ್ಠಿಸಿ ನಾನು ನಿಪಿ 1 ದಾಖಲೆಯನ್ನು ಸೃಷ್ಠಿಸಿದ್ದೇನೆ ಎಂದರೆ ಸರಿಯಲ್ಲ, ನಿಪಿ 1 ಕ್ಕೆ ನಾನು ಎಷ್ಟು ಕಡೆ ಸಹಿ ಮಾಡಿದ್ದೇನೆ ಎಂದರೆ ನೆನಪಿಲ್ಲ. ನಾನು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನೆನಪಿನ ಶಕ್ತಿ ಕಮ್ಮಿ ಆಗಿದೆ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ಸಹಿ ಮಾಡುವ ಸಮಯದಲ್ಲಿ ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗೆ ಸಹಿ ಮಾಡಿಲ್ಲ. ನಿಪಿ 1 ಮಾಡಿಸುವ ಸಮಯದಲ್ಲಿ ನೋಟರಿ ವಕೀಲರ ಲೆಡ್ಜರ್ ಗೆ ಸಹಿ ಮಾಡಬೇಕು ಎಂದರೆ ಸರಿ. ನಿಪಿ 1 ಕ್ಕೆ ನೋಟರಿ ರೆಜಿಸ್ಟರ್ ನ ಕ್ರಮ ಸಂಖ್ಯೆ ಹಾಕಿಲ್ಲ, ಆದ್ದರಿಂದ ನಿಪಿ 1 ನ್ನು ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ.

5. ನಿಪಿ 1 ಕ್ಕೆ ಸಂಬಂದಪಟ್ಟಂತೆ ನಾನು ಬೆಂಗಳೂರಿಗೆ ಹೋಗಿಲ್ಲ ಹಾಗೂ ಬೆಂಗಳೂರಿನವರು ಯಾರು ಬಂದಿಲ್ಲ ಎಂದರೆ ಸರಿ. ನನ್ನ ತಂದೆ 1979 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಾಯಿ 2008 ರಲ್ಲಿ ಮೃತಪಟ್ಟಿರುತ್ತಾರೆ. ನಾವು ನಮ್ಮ ತಂದೆಗೆ 3 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು. ಮೊದಲನೇ ಮಗ ತುಕಾರಾಮ. 1967 ರಲ್ಲಿ ನನ್ನ ತಂದೆ ಮನೆಯ ಕೆಲಸಗಳನ್ನು ಮಾಡಲು ಆಗದೇ ಇದ್ದಾಗ ನನ್ನ ಹಿರಿಯಣ್ಣ ತುಕಾರಾಮರವರಿಗೆ ಸದರಿ ಕೆಲಸಗಳನ್ನು ವಹಿಸುತ್ತಿದ್ದರು ಎಂದರೆ ಸರಿಯಲ್ಲ. 1967 ರಲ್ಲಿ

ನಾನು ಅಪ್ರಾಪ್ತ ವಯಸ್ಸಿಗ. ನಾನು ಅಪ್ರಾಪ್ತನಾಗಿದ್ದ ಕಾರಣ ಮನೆಯಲ್ಲಿ ಯಾರಾರು ಯಾವ ಕೆಲಸ ನಿರ್ವಹಿಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

6. ಸ.ನಂ.194 ಮಿರ್ಲೆ ಗ್ರಾಮ ಠಾಣೆಗೆ ಸೇರಿದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನಾನು ಕೊನೆಯ ಮಗ. 1967 ರ ನಂತರ ನನ್ನ ಹಿರಿಯ ಅಣ್ಣ ತುಕಾರಾಮ ಮತ್ತು ಕಿರಿಯ ಅಣ್ಣ ಶಾಮಣ್ಣ ನಮ್ಮ ಮನೆಯ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಅಣ್ಣ ಡಾ.ಶಾಮಣ್ಣರವರಿಗೆ ಹಾಗೂ ನನಗೆ ಸುಮಾರು 13 ವರ್ಷ ವಯಸ್ಸಿನ ಅಂತರವಿದೆ. ತುಕಾರಾಮ ಶಾಮಣ್ಣರವರಿಗಿಂತ 5 ವರ್ಷ ದೊಡ್ಡವರುಎಂದರೆ 4 ವರ್ಷ ದೊಡ್ಡವರು ಎಂದು ನುಡಿಯುತ್ತಾರೆ. 1967 ರಲ್ಲಿ ನಾನು ಅಪ್ರಾಪ್ತನಾಗಿದ್ದು ನನಗೆ ಯಾವುದೇ ಮನೆಯ ವ್ಯವಹಾರ ಬಗ್ಗೆ ಯಾವುದೇ ಅರಿವು ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಸುಮಾರು 10 ರಿಂದ 12 ವರ್ಷಕ್ಕೆ ವ್ಯವಹಾರದ ಜ್ಞಾನ ಬಂದಿದೆ.

7. ವಾದಿ 1972 ರಲ್ಲಿ ವಿವಾಹವಾಗಿದ್ದಾರೆ. ವಾದಿ ದಾವೆಯನ್ನು ಒತ್ತುವರಿ ತೆರವು ಮಾಡಿಕೊಡಿ ಎಂದು ಸಲ್ಲಿಸಿದ್ದಾರೆ. 1967 ಕ್ಕೂ ಮುನ್ನ ನಮ್ಮ ಕುಟುಂಬಕ್ಕೆ ಸ.ನಂ.194 ರಲ್ಲಿ ಸುಮಾರು 4 ರಿಂದ 5 ಎಕರೆ ಜಮೀನು ಇತ್ತು. ನಿಖರವಾಗಿ ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸ.ನಂ.194 ರಲ್ಲಿ ನನಗೆ 36 ಗುಂಟೆ, ನನ್ನ ಇಬ್ಬರು ಅಣ್ಣಂದಿರಿಗೆ ತಲಾ 30 ಗುಂಟೆ ನನ್ನ 3 ಜನ ಅಕ್ಕಂದಿರಿಗೆ ತಲಾ 6 ಗುಂಟೆ ಜಮಿನಿನಂತೆ 1972 ರಲ್ಲಿ ವಿಭಾಗವಾಗಿದೆ. ನಿಪಿ 4 ವಿಭಾಗಪತ್ರದಂತೆ ನಮ್ಮ ಕುಟುಂಬಕ್ಕೆ ಸ.ನಂ.194 ರಲ್ಲಿ 2 ಎಕರೆ 4 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸ.ನಂ.194 ರಲ್ಲಿ 1972 ಕ್ಕೂ ಮುನ್ನ ನನ್ನ ತಂದೆ ಹಾಗೂ ನನ್ನ ಇಬ್ಬರೂ ಸಹೋದರರು ಹಲವಾರು ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಅಪ್ರಾಪ್ತನಾಗಿದ್ದ ಕಾರಣ ಸದರಿ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇಬ್ಬರಿಗೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅಣ್ಣಂದಿರು ಯಾರಿಗೂ ಮಾರಾಟ ಮಾಡಿಲ್ಲ. ಆ ರೀತಿ ಮಾರಾಟ ಮಾಡಿ ಬಂದ ಹಣವನ್ನು ನಮ್ಮ ಕುಟುಂಬದ ಅಭಿವೃದ್ಧಿಗೆ ನನ್ನ ತಂದೆ ಮತ್ತು ಸಹೋದರರು ಬಳಸುತ್ತಿದ್ದರು ಎಂದರೆ ಯಾವುದೇ ಮಾರಾಟ ಮಾಡಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ಸಂದರ್ಭದಲ್ಲಿ ನಾನು ಅಪ್ರಾಪ್ತನಾಗಿದ್ದ ಕಾರಣ ಸದರಿ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ.

8. 1967 ರಲ್ಲಿ ನಮ್ಮ ಕುಟುಂಬ ಆಗರ್ಭ ಶ್ರೀಮಂತವಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಜಮೀನು ಮತ್ತು ಮನೆ ಇಲ್ಲದವರು ನಮ್ಮ ಮನೆಗೆ ಬಂದು ಇರಲು ಮತ್ತು ಉಳುಮೆ ಮಾಡಲು ಜಾಗ ಕೊಡಿ ಎಂದು ಕೇಳುತ್ತಿದ್ದರು ಎಂದರೆ ಸರಿ. ಅಂತಹ ಸಂದರ್ಭದಲ್ಲಿ ನಮ್ಮ ತಂದೆ ಮತ್ತು ಸಹೋದರರು ಅಂದಿನ ಮಾರುಕಟ್ಟೆ ಮೌಲ್ಯದ ಆಧಾರದ ಮೇರೆಗೆ ಅಂತಹರವರಿಂದ ಹಣ ಪಡೆದು ಉಪನೊಂದಣಿ ಕಚೇರಿಗೆ ನಮ್ಮ ಜಮೀನುಗಳನ್ನು ಮತ್ತು ನಿವೇಶನವನ್ನು ಕ್ರಯ ಮಾಡಿಕೊಡುತ್ತಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ತಿಳಿದಿರುವ ಹಾಗೆ ಗುಳ್ಳಪ್ಪ ಮತ್ತು ಗುಂಜಪ್ಪ ರವರಿಗೆ ನನ್ನ ತಂದೆ ಜಮೀನು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

9. 1967 ಮತ್ತು 1972 ರಲ್ಲಿ ಸ.ನಂ.194 ಸಂಪೂರ್ಣವಾಗಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿದ್ದು ನಿವೇಶನಗಳು ಅಂದರೆ ಸೈಟ್ ಆಗಿದ್ದವು ಎಂದರೆ ಸರಿಯಲ್ಲ. ಆದ್ದರಿಂದ ಆ ಸಮಯದಲ್ಲಿ ನಿವೇಶನಗಳಿಗೆ ಗ್ರಾಮ ಪಂಚಾಯಿತಿಯಿಂದ ದಾಖಲೆಗಳನ್ನು ನೀಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ.ನಂ.194 ಇನ್ನು ಸರ್ವೆ ನಂಬರ್ ಆಗಿ ಇದೆ ಎಂದು ನುಡಿಯುತ್ತಾರೆ. ನಿಪಿ 4 ರ 134 ನೇ ಪುಟದಲ್ಲಿ ನನಗೆ ಬಂದಿರುವ ಸ್ವತ್ತಿನ 8 ನೇ ಐಟಂದ ನ ಚೆಕ್ಕುಬಂದಿಯ ಪೂರ್ವಕ್ಕೆ ಎಂ.ಟಿ.ಶಾಮಣ್ಣನ ಹಿಸ್ಸೆ ಸೈಟು ಎಂದು ನಮೂದು ಇದೆ ಎಂದರೆ ಸಾಕ್ಷಿಯು ಈಗಲೂ ಸರ್ವೆ ನಂಬರ್ ಆಸ್ತಿ ಎಂದು ನುಡಿಯುತ್ತಾರೆ. ನಿಪಿ 4 ರಲ್ಲಿ ಸೈಟು ಎಂದು ನಮೂದು ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್ )
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ